ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಸ್ಪೆಷಲ್ ಕೇಸ್ ನಂಃ **205/2023**

| | ಚಾಸಾಃ **3** | ಅಸಾಃ **3** |
|---|---|---|
| ಹೆಸರು | ಮಂಜೇಗೌಡ | |
| ತಂದೆಯ ಹೆಸರು **:** | ನಂಜೇಗೌಡ | |
| ವಯಸ್ಸು**:** | 56 ವರ್ಷ | |
| ಕೆಲಸಃ | ವ್ಯವಸಾಯ | |
| ವಾಸಸ್ಥಳ | ಅಟ್ಟಾವರ ಗ್ರಾಮ | |

ದಿನಾಂಕಃ **07/03/2025** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ನಾನು ಅವಿದ್ಯಾವಂತ. ಸಹಿ ಮಾಡಲು ಕಲಿತಿರುತ್ತೇನೆ. ಚಾಸಾ-1 ಮತ್ತು 2 ರವರು ಗೊತ್ತು. ಅವರು ನಮ್ಮ ಊರಿನವರು. ಆರೋಪಿ ಗೊತ್ತು.ಅವರು ಕೆಇಬಿ ಇಂಜಿನಿಯರ್ ಆಗಿರುತ್ತಾರೆ. ಆರೋಪಿ ನನಗೆ ಗೊತ್ತಿಲ್ಲ, ಅವರು ಯಾವ ಊರಿನವರು, ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ,. ಚಾಸಾ-1 ರವರಿಗೆ ವಿದ್ಯುತ್ ಅಪಘಾತವಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ-1 ರವರನ್ನು ಆಸ್ಪತ್ರೆಗೆ ಬೇರೆಯವರು ಕರೆದುಕೊಂಡು ಹೋಗಿರುತ್ತಾರೆ. ನಾನು ಬೈಕಿನಲ್ಲಿ ಹೋಗಿರುತ್ತೇನೆ. ವಿದ್ಯುತ್ ಅಪಘಡದ ಕಾರಣದಿಂದ ಚಾಸಾ-1 ರವರು ಕೆಳಗೆ ಬಿದಿದ್ದರು. ಅವರಿಗೆ ಏನಾಗಿತ್ತು ಎಂದು ಗೊತ್ತಿಲ್ಲ. ಅವಘಡಕ್ಕೆ ಯಾರು ಕಾರಣ, ಏನು ಕಾರಣ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

( ಈ ಹಂತದಲ್ಲಿ ಅಭಿಯೋಗದ ಕೇಸಿಗೆ ಸಾಕ್ಷಿ ಪ್ರತಿಕೂಲ ಸಾಕ್ಷಿ ನುಡಿದಿದ್ದು ಮಾನ್ಯ ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)

ಪಾಟೀ ಸವಾಲು ಮಾನ್ಯ ಎಸ್ ಪಿ ಪಿ ರವರಿಂದಃ

2. 17.10.2019 ರಂದು ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-2 ರವರು ನಮ್ಮ ಜಮೀನಿಗೆ ಹೋಗುತ್ತಿರುವಾಗ, ನಮ್ಮ ಊರಿನ ಮುನಿಯಪ್ಪ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ನಮ್ಮ ಗ್ರಾಮದ ಅರ್ಚಕರಾದ ಕೃಷ್ಣಯ್ಯ ರವರ ಮನೆಯ ಮುಂಭಾಗದ ರಸ್ತೆಯಲ್ಲಿ ಹೋಗುತ್ತಿದ್ದಾಗ, ಚಾಸಾ-1 ರವರು ಹುಲ್ಲು ಹೊರೆ ಹೊತ್ತುಕೊಂಡು ನಡೆದುಕೊಂಡು ಬರುವಾಗ, ರಸ್ತೆಗೆ ಅಡ್ಡಲಾಗಿ ಮೇಲ್ಭಾಗದಲ್ಲಿ ಹಾದುಹೋಗಿರುವ ವಿದ್ಯುತ್ ಲೈನಿನ 3 ವೈರ್ ಗಳ ಪೈಕಿ ಒಂದು ವೈರ್ ತುಂಡಾಗಿ, ಚಾಸಾ-1 ರವರ ಒತ್ತಿದ ಹುಲ್ಲು ಹೊರೆ ಮೇಲೆ ಬಿದ್ದು, ಚಾಸಾ-1 ರವರಿಗೆ ವಿದ್ಯುತ್ ಶಾಕ್ ಆಗಿ ಅವರು ಬಿದ್ದಿರುತ್ತಾರೆ ಎಂದರೆ ಸರಿಯಲ್ಲ.

3. ನಾನು ಮತ್ತು ಚಾಸಾ-2 ರವರು ಓಡಿ ಬಂದು ಚಾಸಾ-1 ರವರನ್ನು ಎತ್ತಿ ಸುಧಾರಿಸಿದಾಗ, ಚಾಸಾ-1 ರವರ ಎರಡು ಕೈಗಳಿಗೆ ವಿದ್ಯುತ್ ಶಾಕ್ ಆಗಿ ಗಾಯವಾಯಿತು ಎಂದರೆ ಸರಿಯಲ್ಲ. ನಂತರ ಅವರು ಕೆಳಗೆ ಬಿದ್ದಾಗ ಅವರ ತಲೆಗೆ ಮತ್ತು ಬೆನ್ನಿಗೆ ತರಚಿದ ಗಾಯವಾಗಿತ್ತು ಎಂದರೆ ಸರಿಯಲ್ಲ. ನಂತರ 108 ಆಂಬುಲೆನ್ಸನ್ನು ಕರೆಸಿ ದುದ್ದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. ಅಲ್ಲಿಂದ ಎಸ್ ಎಸ್ ಎಂ ಹಾಸನ ಆಸ್ಪತ್ರೆಗೆ ಕರೆದುಕೊಂಡು ಬಂದು ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಕೃತ್ಯ ಸ್ಥಳದ ವಿದ್ಯುತ್ ವೈರ್ ಹಳೆಯದಾಗಿದ್ದು, ಅದನ್ನು ಬದಲಾಯಿಸುವಂತೆ ಆರೋಪಿತರಿಗೆ ತಿಳಿಸಿದ್ದರು ಸಹ ಅವರ ನಿರ್ಲಕ್ಷ್ಯತೆಯಿಂದ ವಿದ್ಯುತ್ ವೈರ್ ಚಾಸಾ-1 ರವರ ಮೇಲೆ ಬಿದ್ದು ಗಾಯವಾಗಿದೆ ಎಂದರೆ ಸರಿಯಲ್ಲ. ಈ ಬಗ್ಗೆ ದಿನಾಂಕ 18.10.2019 ರಂದು ಪೊಲೀಸರಿಗೆ ಈಗ ಓದಿ ಹೇಳಿದಂತೆ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು.

**4.** ನಿಪಿ-**2** ಮತ್ತು **3** ವಿಷಯ ಗೊತ್ತಿದ್ದರೂ ನಿಜ ಹೇಳಿದರೆ ಆರೋಪಿತರಿಗೆ ಶಿಕ್ಷೆಯಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮಗೆ ಯಾರೂ ಒತ್ತಾಯ ಮಾಡಿಲ್ಲ, ಪ್ರಭಾವ ಬೀರಿಲ್ಲ, ನಾನು ಸ್ವತಃ ಸಾಕ್ಷಿ ನುಡಿಯುತ್ತಿದ್ದೇನೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ ಎನ್ ಎಸ್ ವಕೀಲರಿಂದಃ

5. ಆಂಬುಲೆನ್ಸ್ ಹಿಂದೆ ನಾನು ಬೈಕಿನಲ್ಲಿ ಹೋಗಿರುವ ದಿನಾಂಕ ಗೊತ್ತಿಲ್ಲ.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ